FROM : FAX NO. :230330 Sep. 16 2011 11:38AM P1

ತಾಲೂಕು ಕಚೇರಿ ಸುಳ್ಯ

ಸಂ.ಎಸ್ ಸಿ ಆರ್ ಸಿ ಆರ್.124 /10-11

ದಿನಾಂಕ 13-12-2010

ಅಧಿಕೃತ ಜ್ಞಾಪನಾ

ವಿಷಯ:- ಸರಕಾರೀ- ಕಂದಾಯ ಭೂಮಿಯನ್ನು ಸಂರಕ್ಷಿಸಲು ತಾಲ್ಲೂಕು ಮಟ್ಟದ ಪ್ರಾಧಿಕಾರವನ್ನು ರಚಿಸುವ ಬಗ್ಗೆ.

ಉಲ್ಲೇಖ:- ಸರಕಾರದ ಆದೇಶ ಸಂಖ್ಯೆ ಕಂ.ಇ.82 ಎಲ್‌ಜಿಕ್ಯೂ 99(ಪಿ1) ಬೆಂಗಳೂರು ದಿನಾಂಕ 13-11-2008

- - -

ಸರ್ಕಾರೀ ಭೂಮಿಯ ಒತ್ತುವರಿಯನ್ನು ಪತೆಹಚ್ಚಿ ತೆರವುಗೊಳಿಸಿ ಹಾಗೂ ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಕಲಂ 192(ಎ)ರಡಿಯಲ್ಲಿ ಅಪರಾಧ ಪ್ರಕರಣಗಳನ್ನು ದಾಖಲು ಮಾಡುವ ವಿಷಯಕ್ಕೆ ಸಂಬಂಧಿಸಿದಂತೆ ತಾಲ್ಲೂಕು ಮಟ್ಟದ ಪ್ರಾಧಿಕಾರವನ್ನು ರಚಿಸುವಂತೆ ಉಲ್ಲೇಖಿತ ಸರಕಾರದ ಆದೇಶದಲ್ಲಿ ನಿರ್ದೇಶನ ನೀಡಿರುವುದರಿಂದ ಈ ಕೆಳಗೆ ಕಾಣಿಸಿದಂತೆ ಸುಳ್ಯ ತಾಲೂಕು ಮಟ್ಟದ ಕಾರ್ಯವ್ಯಾಪ್ತಿಯಲ್ಲಿ ಪ್ರಾಧಿಕಾರವನ್ನು ರಚಿಸಿದೆ.

| | |
|---|---|
| 1. ತಹಸೀಲ್ದಾರರು ಸುಳ್ಯ | - ಅಧ್ಯಕ್ಷರು |
| 2.ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಲೋಕೋಪಯೋಗಿ ಇಲಾಖೆ, ಸುಳ್ಯ | - ಸದಸ್ಯರು |
| 3. ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ | - ಸದಸ್ಯರು |
| ಜಿ.ಪಂ ಇಂ. ಉಪವಿಭಾಗ, ಸುಳ್ಯ | - ಸದಸ್ಯರು |
| 4. ತಾಲ್ಲೂಕು ಆರೋಗ್ಯಾಧಿಕಾರಿ, ಸುಳ್ಯ | - ಸದಸ್ಯರು |
| 6. ಮುಖ್ಯಾಧಿಕಾರಿ, ನಗರ ಪಂಚಾಯತ್ ಸುಳ್ಯ | |
| 7. ವಲಯ ಅರಣ್ಯಾಧಿಕಾರಿ, ಸುಳ್ಯ ,ಪಂಜ, ಸುಬ್ರಹ್ಮಣ್ಯ | - ಸದಸ್ಯರು |
| 8. ಕ್ಷೇತ್ರ ಶಿಕ್ಷಣಾಧಿಕಾರಿ ಸುಳ್ಯ | |

ಪ್ರಾಧಿಕಾರವು ಈ ಕೆಳಕಂಡ ಅಂಶಗಳ ಬಗ್ಗೆ ಕಾರ್ಯ ನಿರ್ವಹಿಸತಕ್ಕದ್ದು.

1. ಸರ್ಕಾರೀ ಭೂಮಿಯ ಒತ್ತುವರಿಯನ್ನು ಪತ್ತೆಹಚ್ಚುವುದು.
2. ಸರ್ಕಾರಿ ಭೂಮಿಯನ್ನು ಒತ್ತುವರಿಯಿಂದ ತೆರವುಗೊಳಿಸಿ ತ್ರೈಮಾಸಿಕ ವರದಿಯನ್ನು ಸಲ್ಲಿಸುವುದು.
3. ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಕಲಂ 192(ಎ)ರಡಿಯಲ್ಲಿ ಅಪರಾಧ ಪ್ರಕರಣಗಳನ್ನು ದಾಖಲು ಮಾಡುವುದು.

ತಹಸೀಲ್ದಾರರು- ಸುಳ್ಯ